# ವ್ಯಾಸ – ದಾಸ ಸಾಹಿತ್ಯದ ಸವ್ಯಸಾಚಿ ಶ್ರೀವ್ಯಾಸತತ್ವಜ್ಞರು

ನಾಗರಾಜು ಹಾವೇರಿ

( ಪಲ್ಲವೀಪ್ರಿಯ )

99010 – 52578

ಅಹೋಬಲನೃಸಿಂಹಸ್ಯ ಮಹೋಬಲಮುಪಾಶ್ರಿತಾಃ ।

ಅಸತ್ತಮಿಶ್ರಸಮ್ಮಿಶ್ರಾಂ ಗಣಯಾವೋ ನ ಸಂಸೃತಿಮ್ ॥

ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ರತಾಯಚ ।

ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನುವೇ ॥

ಭೂದೇವವಂದ್ಯಪಾದಾಬ್ಜಂ ಭೂತಿಮಂತಮಭೀಷ್ಟದಂ ।

ಭೂತಲೇಸಾಧುವಿಖ್ಯಾತಂ ಭುವನೇಂದ್ರಗುರುಂಭಜೇ ॥

ಪ್ರಕಟೀಕೃತಟೀಕೋಕ್ತಿರ್ಮರ್ಕಟೀಕೃತಮಾಯಿರಾಟ್ ।

ಚಕೃತಾತ್ವಾ ್ಯಸತತ್ವಜ್ಞಮಸ್ಕರೀಂದ್ರಃಕೃಪಾಮಯೀ ॥

ವ್ಯಾಸ – ದಾಸ ಸಾಹಿತ್ಯದ ಸವ್ಯಸಾಚಿಗಳು ಶ್ರೀ ವ್ಯಾಸತತ್ವಜ್ಞರು. ಇವರು 18ನೇ ಶತಮಾನದ ಯತಿಪುಂಗವರು. ಇವರು ಅಗ್ನ್ಯಾಂಶ ಸಂಭೂತರು, ಅಲ್ಲದೇ ದ್ವಾಪರದಲ್ಲಿ ದುಷ್ಟದ್ಯುಮ್ನರಾಗಿ ಅವತರಿಸಿ ಪಾಂಡವರ ಸೇನಾಧಿಪತಿಯೂ ಮತ್ತು ಶ್ರೀ ಭೀಮಸೇನದೇವರ ರಥಸಾರಥಿಯಾಗಿದ್ದ ಶ್ರೀ ಭೀಮಸೇನದೇವರಿಂದ ತತ್ವಜ್ಞಾನವನ್ನು ಸವಿದ ಮಹಾನುಭಾವರು.

18ನೇ ಶತಮಾನದಲ್ಲಿ ಆಂಧ್ರಪ್ರದೇಶದ ಗದ್ವಾಲ ತಾಲೂಕಿನ ಐಜಿ ಎಂಬ ಗ್ರಾಮದಲ್ಲಿ ಶ್ರೀವೆಂಕಟನರಸಿಂಹಾಚಾರ್ಯ ದಂಪತಿಗಳಿದ್ದರು. ಆಚಾರ್ಯರು ಪ್ರಖ್ಯಾತ ಪಂಡಿತರಾಗಿ ಅನೇಕ ಶಿಷ್ಯ ಸಂಪತ್ತನ್ನು ಹೊಂದಿದ್ದರು. ಸತ್ಪುತ್ರ ಸಂತಾನಕ್ಕಾಗಿ ಶ್ರೀಶ್ರೀನಿವಾಸನ ಮೊರೆಹೊಕ್ಕು ಭಕ್ತಿ, ಶ್ರದ್ಧೆಗಳಿಂದ ಸೇವೆ ಮಾಡಿದರು. ಶ್ರೀಶ್ರೀನಿವಾಸನು ಆಚಾರ್ಯ ದಂಪತಿಗಳ ಸೇವೆಗೆ ಮೆಚ್ಚಿ ಅನುಗ್ರಹಿಸಿದನು. ಶ್ರೀಶ್ರೀನಿವಾಸನ ವರಪ್ರಸಾದದಿಂದ ಆಚಾರ್ಯ ದಂಪತಿಗಳಿಗೆ ಸತ್ಪುತ್ರ ಸಂತಾನವಾಯಿತು. ಶ್ರೀಶೇಷಗಿರೀಶನ ವರಪ್ರಸಾದದಿಂದ ಜನಿಸಿದ ಕೂಸಿಗೆ "ವೆಂಕಟರಾಮ" ಎಂದು ನಾಮಕರಣ ಮಾಡಿದರು.

ಶ್ರೀವೆಂಕಟರಾಮನಿಗೆ ಪ್ರಾಪ್ತವಯಸ್ಸಿನಲ್ಲಿ ಚೌಲ, ಅಕ್ಷರಾಭ್ಯಾಸ, ಉಪನಯನ ಸಂಸ್ಕರಗಳು ನಡೆದವು. ಪ್ರಖ್ಯಾತ ಪಂಡಿತರಾದ ಶ್ರೀವೆಂಕಟನರಸಿಂಹಾಚಾರ್ಯರೇ ತಮ್ಮ ಮಗನಿಗೆ ವಿದ್ಯಾಭ್ಯಾಸ ಮಾಡಿಸಿದರು. ಆದರೆ ಶ್ರೀವೆಂಕಟರಾಮಾಚಾರ್ಯರಿಗೆ ಮಾತ್ರ ವಿದ್ಯಾಭ್ಯಾಸದಲ್ಲಿ ಆಸಕ್ತಿ ಇರಲಿಲ್ಲ. ಆಚಾರ್ಯರು ಪುತ್ರಪ್ರೇಮದಿಂದ ಮಗನನ್ನು ದಂಡಿಸುತ್ತಿರಲಿಲ್ಲ. ಆದರೆ ತಾಯಿ ಮಾತ್ರ ಮಗ ದಡ್ಡನೆಂದು ಚಿಂತೆ ಮಾಡುತ್ತಿದ್ದರು.

ಶ್ರೀವೆಂಕಟರಾಮಾಚಾರ್ಯರ ಸಮಕಾಲೀನರು ಶ್ರೀಗಣೇಶಾಂಶ ಸಂಭೂತರಾದ ಶ್ರೀಗೋಪಾಲದಾಸರು. ಶ್ರೀದಾಸರು ಶ್ರೀಗಾಯತ್ರಿ ಮಂತ್ರೋಪಾಸನೆಗೈದು ಸಿದ್ಧಿಯನ್ನು ಪಡೆದು ತ್ರಿಕಾಲ ಜ್ಞಾನಿಗಳಾಗಿ ಉತ್ತನೂರಿಗೆ ಬಂದು ನೆಲೆಸಿದರು. ಭವಿಷ್ಯನುಡಿವ ದಾಸರೆಂದೇ ಪ್ರಸಿದ್ಧಿಹೊಂದಿದ್ದರು. ಶ್ರೀ ವೆಂಕಟನರಸಿಂಹಾಚಾರ್ಯರ ಪತ್ನಿಯು ತಮ್ಮ

ಮಗನ ಭವಿಷ್ಯ ಕೇಳಿ ಬರುವಂತೆ ತಮ್ಮ ಪತಿಯಲ್ಲಿ ಒತ್ತಾಯಿಸುತ್ತಿದ್ದರು. ಆಚಾರ್ಯರಿಗೆ ಮಾತ್ರ ದಾಸರಲ್ಲಿ ಅಷ್ಟೇನು ವಿಶ್ವಾಸವಿರಲಿಲ್ಲ. ಆದರೇ ಶ್ರೀಗೋಪಾಲದಾಸರ ಕೀರ್ತನೆಗಳು ಮಾತ್ರ ಎಲ್ಲರೂ ಮೆಚ್ಚುವಂತಾಗಿ, ಆ ಪದಗಳಲ್ಲಿ ಅಡಗಿದ ಪ್ರಮೇಯ ಭಾಗಗಳು ಮತ್ತು ತತ್ವರಹಸ್ಯಗಳನ್ನು ಕಂಡು ಶ್ರೀವೆಂಕಟನರಸಿಂಹಾಚಾರ್ಯರು ಆಶ್ಚರ್ಯ ಚಕಿತರಾಗಿದ್ದರು.

ಶ್ರೀ ವೆಂಕಟನರಸಿಂಹಾಚಾರ್ಯರು ತಮ್ಮ ಮಗನಿಗೆ ವಿವಾಹ ಮಾಡಿದರೆ ಸಧಾರಿಸುತ್ತಾನೆಂದು ನಿರ್ಧರಿಸಿ ಶ್ರೀ ವೆಂಕಟರಾಮಾಚಾರ್ಯರಿಗೆ ವಿವಾಹ ಮಾಡಿದರು. ಆದರೂ ಶ್ರೀ ವೆಂಕಟರಾಮಾಚಾರ್ಯರು ಬದಲಾಗದದ್ದನ್ನು ಕಂಡು ಶ್ರೀ ವೆಂಕಟನರಸಿಂಹಾಚಾರ್ಯರು ಮತ್ತಷ್ಟು ವ್ಯಾಕುಲರಾದರು.

ಹೀಗೆ ಕೆಲವು ದಿನಗಳು ಕಳೆಯಿತು. ಒಂದು ಶುಭದಿನದಂದು ಶ್ರೀ ವೆಂಕಟನರಸಿಂಹಾಚಾರ್ಯರು ಶ್ರೀನಿವಾಸನ ದರ್ಶನಕ್ಕಾಗಿ ಉತ್ತನೂರಿಗೆ ಬಂದರು. ಆಚಾರ್ಯರು ಶ್ರೀಶ್ರೀನಿವಾಸನ ದರ್ಶನ ಪಡೆದು, ಶ್ರೀಶ್ರೀನಿವಾಸನ ಮುಂಭಾಗದಲ್ಲೇ ಹರಿಕೀರ್ತನೆಯನ್ನು ಪಾಡುತ್ತಾ ಕುಳಿತಿರುವ ಶ್ರೀ ಗೋಪಾಲದಾಸರನ್ನು ಕಂಡರು. ಈರ್ವರೂ ಒಬ್ಬರೊನ್ನಬ್ಬರು ಯೋಗಕ್ಷೇಮವನ್ನು ವಿಚಾರಿಸಿದರು. ಆಗ ಶ್ರೀ ಗೋಪಾಲದಾಸರೇ ಈಗಲಾದರೂ ನಿಮ್ಮ ಪತ್ನಿಯವರ ಮಾತಿಗೆ ಬೆಲೆ ಕೊಟ್ಟು ಬಂದಿರೆಲ್ಲಾ ಎಂದು ಸ್ವಾಗತಿಸಿದರು. ಆದರೆ ಆಚಾರ್ಯರು ಮಾತ್ರ ಹಾಗೇನಿಲ್ಲಾ ಶ್ರೀಶ್ರೀನಿವಾಸನ ದರ್ಶನಕ್ಕಾಗಿ ಬಂದೆ ಎಂದು ಹೇಳಿದರು. ಆಚಾರ್ಯರು ಗತ್ಯಂತರವಿಲ್ಲದೇ ತಮ್ಮ ಮಗನ ಭವಿಷ್ಯವೇನೆಂದು ವಿಚಾರಿಸಿದರು.

ಅಗ್ನ್ಯಾಂಶ ಸಂಭೂತರಾದ ಶ್ರೀವೆಂಕಟರಾಮಾಚಾರ್ಯರ ಕುರಿತು ಚಿಂತಿಸುವಿರೇಕೆ? ಶ್ರೀವೆಂಕಟರಾಮಾಚಾರ್ಯರು ಸರ್ವರಿಂದಲೂ ವಂದಿತರಾಗಿ ಶ್ರೀವೇದವ್ಯಾಸದೇವರ ಮತ್ತು ಶ್ರೀಮದಾನಂದತೀರ್ಥರ ವಿಶೇಷ ಸೇವೆಯನ್ನು ಮಾಡುತ್ತಾರೆ ನಿಶ್ಚಿಂತರಾಗಿಯಿರಿ ಎಂದು ಶ್ರೀಗೋಪಾಲದಾಸರು ಭವಿಷ್ಯ ನುಡಿದರು.

ಶ್ರೀವೆಂಕಟನರಸಿಂಹಾಚಾರ್ಯರು ತಮ್ಮ ಮಗನ ಏನು ಹೇಳಿದರೂ ವಿದ್ಯೆ ಇಲ್ಲದವನು ಹೇಗೆ ಪಂಡಿತನಾಗುತ್ತಾನೆ ಎಂದು ಶ್ರೀದಾಸರನ್ನು ಪ್ರಶ್ನಿಸಿದರು. ಆಗ ಶ್ರೀದಾಸರು ಶ್ರೀವೆಂಕಟರಾಮಾಚಾರ್ಯರ ಪೂರ್ವ ಸಂಸ್ಕಾರವು ಬಲವತ್ತರವಾದ್ದರಿಂದ ಶ್ರವಣ ಮಾತ್ರದಿಂದಲೇ ಉದ್ಧಾಮ ಪಂಡಿತನಾಗುವನೆಂದು ಹೇಳಿದರು. ನೀವು ಪ್ರತಿನಿತ್ಯ ಶ್ರೀವೆಂಕಟರಾಮಾಚಾರ್ಯರನ್ನು ಕೂಡಿಸಿಕೊಂಡು ಸರ್ವಮೂಲ ಗ್ರಂಥಗಳನ್ನು ಪಾರಾಯಣ ಮಾಡುತ್ತಾ ಬನ್ನಿರಿ. ಈ ವಿಷಯದಲ್ಲಿ ಅನುಮಾನ ಬೇಡವೆಂದು ಶ್ರೀಶ್ರೀನಿವಾಸನೇ ನನ್ನಲ್ಲಿ ನಿಂತು ನುಡಿಸುತ್ತಿದ್ದಾನೆ ಹಾಗೂ ಅಪ್ಪನವರು ಕಳುಹಿಸಿಕೊಟ್ಟ ಉತ್ತತ್ತಿಯನ್ನು ಅಭಿಮಂತ್ರಿಸಿ ಆಚಾರ್ಯರನ್ನು ಕಳುಹಿಸಿಕೊಟ್ಟರು.

ಶ್ರೀವೆಂಕಟನರಸಿಂಹಾಚಾರ್ಯರು ಐಜಿಗೆ ಬಂದು ತಮ್ಮ ಪತ್ನಿಗೆ ನಡೆದ ಎಲ್ಲಾ ವಿಷಯವನ್ನು ತಿಳಿಸಿದರು. ಆಚಾರ್ಯರ ಪತ್ನಿ ಸಂತೋಷಪಟ್ಟು ಮನದಲ್ಲೇ ಶ್ರೀಗೋಪಾಲದಾಸರಿಗೆ ವಂದಿಸಿದರು. ಶ್ರೀಗೋಪಾಲದಾಸರು ಅಭಿಮಂತ್ರಿಸಿಕೊಟ್ಟ ಉತ್ತತ್ತಿಯನ್ನು ಆಚಾರ್ಯರು ತಮ್ಮ ಮಗನಿಗೆ ಕೊಟ್ಟರು. ಶ್ರೀವೆಂಕಟರಾಮಾಚಾರ್ಯರು ಮಹಾಪ್ರಸಾದವೆಂದು ಸ್ವೀಕರಿಸಿದ ತಕ್ಷಣ ಶ್ರೀಶ್ರೀನಿವಾಸನ ದಯೆಯಿಂದ ಅವರ ಮನ ಪರಿವರ್ತನೆಯಾಯಿತು.

ಅಂದಿನಿಂದಲೇ ಆಚಾರ್ಯರು ಸರ್ವಮೂಲ ಗ್ರಂಥಗಳ ಪಾರಾಯಣ ಪ್ರಾರಂಭಿಸಿದರು. ಶ್ರೀಗೋಪಾಲದಾಸರ ವಚನದಂತೆ ಕಾಲಕ್ರಮದಲ್ಲಿ ಶ್ರೀವೆಂಕಟರಾಮಾಚಾರ್ಯರು ಉದ್ದಾಮ ಪಂಡಿತರಾದರು. ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ ಎಂಬಂತೆ ಶ್ರೀಹರಿ ಒಲಿದರೇ ಯಾವುದು ತಾನೇ ಅಸಾಧ್ಯ. ಶಾಸ್ತ್ರ ವ್ಯಾಸಂಗದಲ್ಲಿ ವಿಮುಖನಾಗಿದ್ದ ಮಗನು ನೋಡುನೋಡುತ್ತಿದ್ದಂತೆ ಉದ್ದಾಮ ಪಂಡಿತನಾಗಿ, ಅನೇಕ ಶಿಷ್ಯರಿಗೆ ಪಾಠ ಹೇಳುವ ಮಟ್ಟಕ್ಕೆ ತಲುಪಿದ ಮತ್ತು ಪಂಡಿತ ಮಂಡಲಿಯಿಂದ ಐಜಿ ಆಚಾರ್ಯರೆಂದು ಗೌರವದಿಂದ ಕರೆಯಿಸಿಕೊಳ್ಳುತ್ತಿದ್ದುದನ್ನು ನೋಡಿ ಆಚಾರ್ಯರಿಗೆ ಬಹಳ ಸಂತೋಷವಾಯಿತು.

ಶ್ರೀವೆಂಕಟನರಸಿಂಹಾಚಾರ್ಯರು ಹರಿಪದ ಸೇರಿದ ಮೇಲೆ ಅತೀವ ನೊಂದ ಶ್ರೀವೆಂಕಟರಾಮಾಚಾರ್ಯರಿಗೆ ಕೃಷ್ಣಾನದಿಯ ತೀರದಲ್ಲಿರುವ ಬೀಚುಪಲ್ಲಿಗೆ ಬಂದು ಸೇವೆ ಮಾಡೆಂದು ಶ್ರೀಪ್ರಾಣದೇವರ ಸ್ವಪ್ನವಾಯಿತು. ಶ್ರೀಪ್ರಾಣದೇವರ ಆದೇಶದಂತೆ ಆಚಾರ್ಯರು ಬೀಚುಪಲ್ಲಿಗೆ ಬಂದು ಸೇವೆ ಸಲ್ಲಿಸಿದರು.

ಶ್ರೀ ಐಜಿ ಆಚಾರ್ಯರು ಶ್ರೀಗೋಪಾಲದಾಸರ ಪದಗಳಿಗೆ ಮಾರುಹೋಗಿ ಶ್ರೀದಾಸರಲ್ಲಿಗೆ ಹೋಗಿ ಅವರು ನಡೆಸುತ್ತಿದ್ದ ಭಜನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರೊಂದಿಗೆ ಆಧ್ಯಾತ್ಮಿಕ ಚಿಂತನೆಯಲ್ಲಿ ಪಾಲ್ಗೊಂಡು ಶ್ರೀದಾಸರಲ್ಲಿ ಮಾತನಾಡುತ್ತಿದ್ದರೇ ಸಮಯದ ಅರಿವೇ ಇರುತ್ತಿರಲಿಲ್ಲ. ಶ್ರೀಗೋಪಾಲದಾಸರಿಗೂ ಶ್ರೀವೆಂಕಟರಾಮಾಚಾರ್ಯರ ಸ್ವಭಾವ, ಮುಗ್ಧತೆ, ತನ್ಮಯತೆಗಳು ಬಹಳ ಇಷ್ಟವಾಗಿತ್ತು.

ಶ್ರೀವ್ಯಾಸರಾಜ ಪ್ರತಿಷ್ಠಾಪಿತ ಶ್ರೀಪ್ರಾಣದೇವರ ಸನ್ನಿಧಿಯಲ್ಲಿ ಶ್ರೀವೆಂಕಟರಾಮಾಚಾರ್ಯರು ಬಂದಿಳಿದು, ಈ ಪರಮ ಪುಣ್ಯಕ್ಷೇತ್ರವು ಸಾಧನೆಗೆ ಅನುಕೂಲವಾಗುವಂತಾದ್ದು ಎಂದು ತಿಳಿದರು. ಶ್ರೀಮುಖ್ಯಪ್ರಾಣದೇವರ ಪರಮಾನುಗ್ರಹಕ್ಕೆ ಪಾತ್ರರಾದ ಆಚಾರ್ಯರಿಗೆ ಎಲ್ಲವೂ ಕೈಸೇರಿತು. ಅಂದರೆ ಶ್ರೀವಾಯುದೇವರ ಮುಖಾಂತರ ಮೋಕ್ಷಪ್ರದನಾದ ಶ್ರೀವಾಸುದೇವವಿಠಲನ ಒಲಿಮೆಯಿಂದಲೇ **"ವಾಸುದೇವವಿಠಲ"** ಎಂಬ ಅಂಕಿತವು ಶ್ರೀಗೋಪಾಲದಾಸರಿಂದಲೇ ಪ್ರಾಪ್ತವಾಯಿತು.

ಶ್ರೀವೆಂಕಟರಾಮಾಚಾರ್ಯರ ಭಕ್ತಿಗೆ ಒಲಿದು ಆಚಾರ್ಯರ ಹೃನ್ಮಂದಿರದಲ್ಲಿ ನೆಲೆಸಿದ್ದರಿಂದ ವಾಸುದೇವವಿಠಲಾಂಕಿತದಿಂದ ಅನೇಕ ಪದ-ಪದ್ಯ, ಸುಳಾದಿ, ಉಗಾಭೋಗಗಳನ್ನು ರಚಿಸಿ ಶ್ರೀಶ್ರೀನಿವಾಸನಿಗೆ ಅರ್ಪಿಸಿದರು.

ಬೀಚುಪಲ್ಲಿಯಲ್ಲಿ ಆಚಾರ್ಯರು ಸುಮಾರು ೧೨ ವರ್ಷಗಳ ತಪವನ್ನಾಚರಿಸಿದ ನಂತರ ಶ್ರೀಪ್ರಾಣದೇವರ ಆದೇಶದಂತೆ ಚ್ಯವನ ಋಷಿಗಳ ತಪೋಭೂಮಿಯಾದ ವೇಣಿಸೋಮಪುರಕ್ಕೆ ಬಂದು ತಮ್ಮ ಸಾಧನಾ ಕ್ಷೇತ್ರವನ್ನಾಗಿ ಮಾಡಿಕೊಂಡರು. ಈ ಪರಮಪವಿತ್ರವಾದ ಕ್ಷೇತ್ರಕ್ಕೆ ಆಚಾರ್ಯರು ಬಂದದ್ದನ್ನು ಗದ್ವಾಲ ನವಾಬನಿಗೆ ತಿಳಿದು ಬಹಳ ಸಂತೋಷಗೊಂಡು ಎಲ್ಲಾ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು, ಅನೇಕ ಭೂಮಿಗಳನ್ನು ದಾನವಾಗಿ ಕೊಟ್ಟನು.

ಶ್ರೀವೆಂಕಟರಾಮಾಚಾರ್ಯರು ನನಗೆ ಅಪರೋಕ್ಷಜ್ಞಾನವು ಯಾವಾಗ ಆಗುತ್ತದೆಂದು ಶ್ರೀಗೋಪಾಲದಾಸರನ್ನು ಕೇಳಿದರು. ಆಗ ಶ್ರೀಗೋಪಾಲದಾಸರು ನಿಮಗೆ ಮುಂದಿನ ಜನ್ಮದಲ್ಲಾಗುತ್ತದೆಂದು ಹೇಳಿದರು. ಅದಕ್ಕೆ ಆಚಾರ್ಯರು ದುಃಖದಿಂದ ನಾನು ಪ್ರಾಣತ್ಯಾಗಮಾಡುತ್ತೇನೆಂದಾಗ, ಆಚಾರ್ಯರೇ ಮುಂದಿನ ಜನ್ಮವೆಂದರೇ ಗೃಹಸ್ಥಾಶ್ರಮ ತೊರೆದು ಸಂನ್ಯಾಸಾಶ್ರಮ ಎಂದರ್ಥ ಎಂದು ಶ್ರೀಗೋಪಾಲದಾಸರು ತಿಳಿಸಿದರು.

## ಆಶ್ರಮ ಸ್ವೀಕಾರ

ಮುಂದೆ ವಾನಪ್ರಸ್ಥಾಶ್ರಮದಿಂದ ಋಷಿಗಳಂತೆ ಜೀವನವನ್ನು ಸಾಗಿಸಿ, ತರುವಾಯ :–

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ
ಪದವಾಕ್ಯಪ್ರಮಾಣಪಾರಾವಾರಪಾರಂಗತ

ಸರ್ವತಂತ್ರಸ್ವತಂತ್ರ ಶ್ರೀಮದ್ವೈಷ್ಣವಸಿದ್ಧಾಂತಪ್ರತಿಷ್ಠಾಪನಾಚಾರ್ಯ ಶ್ರೀಮನ್ಮೂಲರಘುಪತಿವೇದವ್ಯಾಸದೇವರ ದಿವ್ಯಶ್ರೀಪಾದಪದ್ಮಾರಾಧಕ ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನಾಧೀಶ್ವರರಾದ ಮಂತ್ರಾಲಯ ಶ್ರೀರಾಘವೇಂದ್ರಸ್ವಾಮಿಗಳವರ ಮಠದ ವೇದಾಂತದಿಗ್ವಿಜಯ ವಿದ್ಯಾಸಿಂಹಾಸನಾಧೀಶ್ವರರಾದ ಶ್ರೀವರದೇಂದ್ರತೀರ್ಥಶ್ರೀಪಾದಂಗಳವರ ಕರಕಮಲಸಂಜಾತರಾದ ಶ್ರೀಧೀರೇಂದ್ರತೀರ್ಥಶ್ರೀಪಾದಂಗಳವರ ವರಕುಮಾರಕರಾದ ಶ್ರೀಭುವನೇಂದ್ರತೀರ್ಥಶ್ರೀಪಾದಂಗಳವರು ಶ್ರೀವೆಂಕಟರಾಮಾಚಾರ್ಯರಿಗೆ ತುರ್ಯಾಶ್ರಮ ನೀಡಿ **"ಶ್ರೀವ್ಯಾಸತತ್ವಜ್ಞ"** ರೆಂದು ನಾಮಕರಣ ಮಾಡಿದರು.

ಶ್ರೀವ್ಯಾಸ–ಮಧ್ವರಲ್ಲಿ ಇರುವ ನಿಷ್ಠೆ, ಶ್ರದ್ಧೆ ಮತ್ತು ಅವರಲ್ಲಿ ನೆಲೆಮಾಡಿ ನಿಂತಿರುವ ಜ್ಞಾನ–ಭಕ್ತಿ–ವೈರಾಗ್ಯಗಳನ್ನು ಅರಿತು ತುರ್ಯಾಶ್ರಮವನ್ನು ನೀಡಿ ಪ್ರಣವಮಂತ್ರೋಪದೇಶ ಹಾಗೂ ವೇದಾಂತಸಾಮ್ರಾಜ್ಯಪಟ್ಟಾಭಿಷೇಕವನ್ನು ನೆರವೇರಿಸಿದರು.

ಶ್ರೀವ್ಯಾಸತತ್ವಜ್ಞರಿಗೆ ತಾನಾಗಿ ಒಲಿದು ಬಂದ ಜಗದ್ವಿಖ್ಯಾತ ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನಾಧೀಶ್ವರರಾದ ಮಂತ್ರಾಲಯ ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಪೂರ್ವೀಕ ಗುರುಗಳಾದ ಶ್ರೀವಿಭುದೇಂದ್ರತೀರ್ಥ ಸ್ವಪ್ನಲಬ್ಧ ಶ್ರೀಷೋಡಶಬಾಹು ನರಸಿಂಹದೇವರ ಪ್ರತಿಮೆಯನ್ನು ಶ್ರೀಗುರುಗಳಿಂದ ಪಡೆದು, ವೇಣಿಸೋಮಪುರಕ್ಕೆ ಬಂದು ಯತ್ಯಾಶ್ರಮ ಧರ್ಮಾಚರಣೆಯನ್ನು ಪರಿಪಾಲಿಸುತ್ತಾ, ಹರಿದಾಸರುಗಳ ಜೊತೆಯಲ್ಲಿದ್ದು ಶ್ರೀ ಷೋಡಶಬಾಹು ನರಸಿಂಹದೇವರ ಪೂಜೆಗೈಯ್ಯುತ್ತಾ, ಶ್ರೀಹರಿವಾಯುಗುರುಗಳ ಸ್ಮರಣೆ ಮಾಡುತ್ತಿದ್ದರು. ಮುಂದೆ ಕೆಲವು ದಿನಗಳನಂತರ ಶ್ರೀಭುವನೇಂದ್ರತೀರ್ಥರಿಂದ ಪಡೆದ ಶ್ರೀಷೋಡಶಬಾಹು ನರಸಿಂಹದೇವರನ್ನು ಶ್ರೀಸನ್ನಿಧಾನಕ್ಕೆ ಒಪ್ಪಿಸಿದರು. ಪ್ರಸ್ತುತ ಪೀಠಾಧಿಪತಿಗಳಾದ ಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರಿಂದ ಶ್ರೀಷೋಡಶಬಾಹು ನರಸಿಂಹದೇವರು ಪೂಜೆಗೊಳ್ಳುತ್ತಾ ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿ ವಿರಾಜಮಾನನಾಗಿದ್ದಾನೆ.

ಶ್ರೀವ್ಯಾಸತತ್ವಜ್ಞರು ತಮ್ಮ ಜೀವಿತಾವಧಿಯಲ್ಲಿ ೨೦ ಸಲ ಶ್ರೀಮನ್ನ್ಯಾಯಸುಧಾಮಂಗಳ ಮಹೋತ್ಸವವನ್ನು ನೆರವೇರಿಸಿದ್ದಲ್ಲದೇ, ಶ್ರೀವ್ಯಾಸ–ಮಧ್ವವಾಙ್ಮಯಕ್ಕೆ ಸಲ್ಲಿಸಿದ ಸೇವೆ ಹಾಗೂ ಕೊಡುಗೆ ಅಪಾರ.

ವಿಷ್ಣುತತ್ವನಿರ್ಣಯ ಪ್ರಾಚೀನ ಟೀಕಾ ಟಿಪ್ಪಣೀ – ಗುರುಪ್ರಭಾ

ತತ್ವಪ್ರಕಾಶಿಕಾ ಟಿಪ್ಪಣೀ

ತಾತ್ಪರ್ಯಚಂದ್ರಿಕಾ ಟಿಪ್ಪಣೀ – ಶಾರದಾಗಮತತ್ವಮಾರ್ತಾಂಡದ ಖಂಡನೆ

ತಾತ್ಪರ್ಯಚಂದ್ರಿಕಾ ಟಿಪ್ಪಣೀ – ಶಾರದೇಂದುಃ

ನ್ಯಾಯಸುಧಾರ್ದಕುಲಿಶ, ನ್ಯಾಯಾಮೃತವ್ಯಾಖ್ಯಾನ – ವ್ಯಜನ

ಯತಿಪ್ರಣವಕಲ್ಪ ವ್ಯಾಖ್ಯಾನ

ಮಂದನಂದಿನೀ – ಶ್ರೀಮದ್ಭಾಗವತ ಸಪ್ತಮಸ್ಕಂದಕ್ಕೆ ವ್ಯಾಖ್ಯಾನ

ಗಾಯತ್ರೀ ಸಾರಸಂಗ್ರಹ, ಮಾನಸಸ್ಮೃತಿ, ಲಘುರಸರಂಜನೀ

ಗುರುರಸರಂಜನೀ

ಹಾಗೂ ದಾಸಸಾಹಿತ್ಯ ಕ್ಷೇತ್ರದಲ್ಲಿ ಕೂಡಾ ಸೇವೆ ಸಲ್ಲಿಸಿ ಅನೇಕ ಪದ-ಪದ್ಯ, ಸುಳಾದಿ, ಉಗಾಭೋಗಗಳನ್ನು ವಾಸುದೇವವಿಠಲಾಂಕಿತ ದಿಂದ ರಚಿಸಿ ಶ್ರೀಹರಿ-ವಾಯು-ಗುರುಗಳ ಪರಮಾನುಗ್ರದಿಂದ ಹರಿದಾಸಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿ ಶ್ರಾವಣ ಬಹುಳ ಅಷ್ಟಮೀ ಶ್ರೀಕೃಷ್ಣಜನ್ಮಾಷ್ಟಮೀಯಂದು ವಾಸುದೇವರೂಪಿ ಮೋಕ್ಷಪ್ರದನಾದ ಶ್ರೀಕೃಷ್ಣನ ಪದಾರವಿಂದವನ್ನು ಸೇರಿ ಅವತಾರ ಕಾರ್ಯ ಮುಗಿಸಿ ಅದ್ಯಪಿ ಬೃಂದಾವನದಲ್ಲಿ ವಿರಾಜಮಾನರಾಗಿ ನಂಬಿ ಬಂದ ಭಕ್ತಜನರನ್ನು ಕಲ್ಪವೃಕ್ಷ-ಕಾಮಧೇನುವಿನಂತೆ ಶ್ರೀಹರಿವಾಯುಗುರುಗಳ ಪರಮಾನುಗ್ರಹದಿಂದ ಅನುಗ್ರಹಿಸುತ್ತಿದ್ದಾರೆ.

ಶ್ರೀವ್ಯಾಸತತ್ವಜ್ಞರ ವಿದ್ಯಾಶಿಷ್ಯರಲ್ಲಿ ಮಾದನೂರಿನ ಶ್ರೀವಿಷ್ಣುತೀರ್ಥರು ಪ್ರಮುಖರು ಅಲ್ಲದೇ ಅನೇಕ ಶಿಷ್ಯ ಸಂಪತ್ತನ್ನು ಹೊಂದಿದ್ದರು.